2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 35/2019</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲತಾ | ಪಿಡಬ್ಲ್ಯೂ-11 |
| ಗಂಡನಹೆಸರು | - | ಲೋಕೇಶ್ | ಸಿಡಬ್ಲ್ಯೂ -11 |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ಗೃಹಿಣಿ | |
| ವಾಸ ಸ್ಥಳ | - | ಮರಬನಹಳ್ಳಿ | |

ದಿನಾಂಕಃ 11.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ</u>**-**

1. ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿಲ್ಲ. ರುದ್ರಸ್ವಾಮಿ ನನ್ನ ಅಣ್ಣ. ಚಾಸಾ.1 ಗೊತ್ತಿಲ್ಲ. ಪ್ರಾಸಾ.7 ನನ್ನ ತಾಯಿ. ಪ್ರಾಸಾ.8 ನನ್ನ ಮಾವ. ಪ್ರಾಸಾ.9 ನನ್ನ ಸೋದರತ್ತೆ. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ನನ್ನ ಅಣ್ಣ ರುದ್ರಸ್ವಾಮಿ ಈಗ್ಗೆ 20 ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದನು. ಈಗ್ಗೆ 15 ವರ್ಷಗಳಿಂದ ಆತ ನನ್ನ ಸಂಪರ್ಕದಲ್ಲಿ ಇಲ್ಲ. ಆತ ಈಗ ಬದುಕಿದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನಗೆ ಆತನ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತರೀಕೆರೆ ವೃತ್ತ ನಿರೀಕ್ಷಕರು ನನ್ನ ಅಣ್ಣನ ಬಗ್ಗೆ ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

3. ಸಾಕ್ಷಿಗೆ ಈಗಾಗಲೇ ನಿಪಿ.3 ಮತ್ತು 5 ಎಂದು ಗುರುತಿಸಲಾಗಿರುವ ಫೋಟೋಗಳನ್ನು ಮತ್ತು ಮತ್ತೊಂದು ಫೋಟೋವನ್ನು ತೋರಿಸಲಾಗಿ ಅವುಗಳಲ್ಲಿ ಕಂಡು ಬರುವ ರುಂಡ ಮತ್ತು ಮುಂಡ ಯಾರದ್ದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ದಿನಾಂಕ 07.11.2018 ರಂದು ಬೆಳಿಗ್ಗೆ 6.30 ಗಂಟೆಗೆ ನನ್ನ ಅಣ್ಣ ರುದ್ರಸ್ವಾಮಿ ನನಗೆ ಫೋನ್ ಮಾಡಿ ಆತ ದೀಪಾವಳಿ ಹಬ್ಬಕ್ಕೆ ಮರಬನಹಳ್ಳಿಗೆ ಬರುತ್ತಿರುವುದಾಗಿ ಮತ್ತು ಆ ಸಮಯದಲ್ಲಿ ಆತ ಚಿತ್ರದುರ್ಗದಲ್ಲಿ ಇರುವುದಾಗಿ ತಿಳಿಸಿದನು ಎಂದರೆ ಸರಿಯಲ್ಲ ನಂತರ ಬೆಳಿಗ್ಗೆ 9.30 ಗಂಟೆಗೆ ನನ್ನ ಅಣ್ಣ ರುದ್ರಸ್ವಾಮಿ ಕಾಫಿ ಬಣ್ಣದ ಕಾರಿನಲ್ಲಿ ನಮ್ಮ ಮನೆಗೆ ಬಂದಿದ್ದನು ಮತ್ತು ನನ್ನ ಮಗಳ ಜೊತೆ ಸ್ವಲ್ಪ ಹೊತ್ತು ಆಟವಾಡಿದನು ಎಂದರೆ ಸರಿಯಲ್ಲ. ನಂತರ ನಾವೆಲ್ಲರೂ ಸೇರಿ ನನ್ನ ಅಣ್ಣ ರುದ್ರಸ್ವಾಮಿಯ ಜೊತೆಗೆ ತಿಂಡಿ ತಿಂದೆವು ಎಂದರೆ ಸರಿಯಲ್ಲ. ನಂತರ ಬೆಳಿಗ್ಗೆ 10.00 ಗಂಟೆಗೆ ನನ್ನ ಅಣ್ಣ ರುದ್ರಸ್ವಾಮಿ ಬೆಂಕಿಕೆರೆಯ ಆಶಾ ರವರ ಮನೆಗೆ ಹೋಗಿ ಬರುವುದಾಗಿ ಹೇಳಿ ಹೊರಟನು ಎಂದರೆ ಸರಿಯಲ್ಲ. ಅದಕ್ಕೆ ನಾನು ಹಬ್ಬಕ್ಕೆಂದು ಇಲ್ಲಿಗೆ ಬಂದಿದ್ದೀಯಾ ಅಲ್ಲಿಗೆ ಏಕೆ ಹೋಗುತ್ತಿದ್ದೀಯಾ ಎಂದು ಕೇಳಿದೆನು ಎಂದರೆ ಸರಿಯಲ್ಲ.

ಅದಕ್ಕೆ ನನ್ನ ಅಣ್ಣ ರುದ್ರಸ್ವಾಮಿ 1 ನೇ ಆರೋಪಿ ಆಶಾ ಆತನಿಗೆ ರೂ.20,000/- ಹಣವನ್ನು ಕೊಡುವುದಾಗಿ ಹೇಳಿ ಕರೆದಿರುವುದಾಗಿ ತಿಳಿಸಿ ಹೋಗಿ ಹಣವನ್ನು ಪಡೆದು ವಾಪಾಸ್ಸು ಬರುವುದಾಗಿ ಮತ್ತು ಹಾಗೆಯೇ ವಾಪಸ್ಸು ಬರುವಾಗ ಹಬ್ಬಕ್ಕೆ ಬಾಳೆಕಂದನ್ನು ತರುವುದಾಗಿ ಹೇಳಿ ಹೋದನು ಎಂದರೆ ಸರಿಯಲ್ಲ. ನಂತರ ನನ್ನ ಅಣ್ಣ ವಾಪಾಸ್ಸು ಮನೆಗೆ ಬರಲಿಲ್ಲ, ನಾನು ಹಬ್ಬದ ಬ್ಯುಸಿಯಲ್ಲಿ ನನ್ನ ಅಣ್ಣನಿಗೆ ಫೋನ್ ಮಾಡಲಿಲ್ಲ ಮತ್ತು ನನ್ನ ಅಣ್ಣ ಹಬ್ಬಕ್ಕೆಂದು 1 ನೇ ಆರೋಪಿಯ ಮನೆಯಲ್ಲಿಯೇ ಉಳಿದುಕೊಂಡಿರಬಹುದೆಂದು ಸುಮ್ಮನಿದ್ದೆನು ಎಂದರೆ ಸರಿಯಲ್ಲ. ನಂತರ ದಿನಾಂಕ 08.11.2018 ರಂದು ನನ್ನ ಅಣ್ಣ ರುದ್ರಸ್ವಾಮಿ ಮನೆಗೆ ಬರದಿದ್ದರಿಂದ ನಾನು ಆತನ ಮೊಬೈಲ್ ಗೆ ಫೋನ್ ಮಾಡಿದಾಗ ಅದು ಸ್ವಿಚ್ ಆಫ್ ಎಂದು ಬಂತು ಎಂದರೆ ಸರಿಯಲ್ಲ. ಸಂಜೆ ಸುಮಾರು 6.30 ಗಂಟೆಗೆ ನಾನು 1 ನೇ ಆರೋಪಿಗೆ ಫೋನ್ ಮಾಡಿ ವಿಚಾರಿಸಿದಾಗ ಆಕೆ ನನ್ನ ಅಣ್ಣ ಹಿಂದಿನ ದಿನ ಬೆಳಿಗ್ಗೆ ಸುಮಾರು 10.30 ಗಂಟೆಗೆ ಆಕೆಯ ಮನೆಗೆ ಹೋಗಿದ್ದಾಗಿ, ಮಧ್ಯಾಹ್ನ ಅವರೊಂದಿಗೆ ಊಟ ಮಾಡಿ ಸಂಜೆಯವರೆಗೂ ಅವರ ಮನೆಯಲ್ಲಿಯೇ ಇದ್ದುದ್ದಾಗಿ ನಂತರ ರಾತ್ರಿ 8.00 ಗಂಟೆಗೆ ನನ್ನ ಅಣ್ಣನಿಗೆ ಯಾವುದೇ ಫೋನ್ ಕಾಲ್ ಬಂದಾಗ ಆತ ತುಂಬಾ ಜೋರಾಗಿ ಯಾರೊಂದಿಗೋ ಮಾತನಾಡುತ್ತಾ ಹೊರಗೆ ಹೋಗಿದ್ದಾಗಿ ನಂತರ ಕಾರಿನ ಕೀಯನ್ನು ಕೊಡುವಂತೆ

ಆತ ಕೇಳಿದ್ದರಿಂದ ಆಕೆ ಆತನಿಗೆ ಕಾರಿನ ಕೀಯನ್ನು ತಂದು ಕೊಟ್ಟಿದ್ದಾಗಿ ಮತ್ತು ನನ್ನ ಅಣ್ಣ ಕಾರನ್ನು ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದಳು ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ನಾನು ಬೆಂಗಳೂರಿನಲ್ಲಿ ನನ್ನ ಅಣ್ಣ ರುದ್ರಸ್ವಾಮಿಗೆ ಇನ್ಸ್ ಟಾಲ್ ಮೆಂಟಿನಲ್ಲಿ ಟಿವಿಯನ್ನು ಕೊಡಿಸಿದ್ದಾಗಿ, ಅದರ ಹಣವನ್ನು ಕಟ್ಟುವಂತೆ ಟಿವಿಯವರು ಆಕೆಗೆ ಫೋನ್ ಮಾಡುತ್ತಿದ್ದಾಗಿ ಮತ್ತು ಅವರಿಗೆ ನಾನೇನು ಉತ್ತರ ಕೊಡಲಿ ಎಂದು ನನ್ನನ್ನು ಕೇಳಿದಳು ಎಂದರೆ ಸರಿಯಲ್ಲ. ಅದಕ್ಕೆ ನಾನು ಏನು ಮಾತನಾಡಲಿಲ್ಲ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ನೀವೇನಾದರೂ ಪೊಲೀಸ್ ಕಂಪ್ಲೆಂಟ್ ಕೊಡುತ್ತೀರಾ ಎಂದು ಕೇಳಿದಾಗ ನಾನು ಈಗಲೇ ಕೊಡುವುದಿಲ್ಲ ಒಂದೆರಡು ದಿನ ಬಿಟ್ಟು ನೋಡಿ ಕೊಡುತ್ತೇವೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ.

5. ದಿನಾಂಕ 09.11.2018 ರಂದು ಮಧ್ಯಾಹ್ನ 11.00 ಗಂಟೆಗೆ ನಾನು 1 ನೇ ಆರೋಪಿಗೆ ಫೋನ್ ಮಾಡಿ ನನ್ನ ಅಣ್ಣ ಇನ್ನೂ ಮನೆಗೆ ಬಂದಿಲ್ಲ ಆತ ನಿನಗೆ ಮತ್ತೇನಾದರೂ ಫೋನ್ ಮಾಡಿದ್ದಾನಾ ಎಂದು ಕೇಳಿದೆನು ಎಂದರೆ ಸರಿಯಲ್ಲ. ಆಗ ಆಕೆ ಫೋನ್ ಮಾಡಿಲ್ಲ ಎಂದು ತಿಳಿಸಿ ಆಕೆ ಹಬ್ಬಕ್ಕೆಂದು ಸುಣಿಗೆರೆಯ ಆಕೆಯ ಅತ್ತೆಯ ಮನೆಗೆ ಹೋಗಿರುವುದಾಗಿ ಮತ್ತು ಜಾಸ್ತಿ ಮಾತನಾಡಲು ಆಗುವುದಿಲ್ಲ, ಬೆಂಗಳೂರಿಗೆ ಹೋದಾಗ ಅಕ್ಕಪಕ್ಕದವರನ್ನು ವಿಚಾರ ಮಾಡಿ ಹೇಳುವುದಾಗಿ ತಿಳಿಸಿದಳು

ಎಂದರೆ ಸರಿಯಲ್ಲ.

6. ದಿನಾಂಕ 10.11.2018 ರಂದು ಮಧ್ಯಾಹ್ನ 2.00 ಗಂಟೆಗೆ ಪ್ರಾಸಾ.8 ರವರು ನನಗೆ ಕರೆ ಮಾಡಿ ಬುಕ್ಕಾಂಬೂದಿ ಕೆರೆಯಲ್ಲಿ ಸುಮಾರು 30-35 ವರ್ಷದ ರುಂಡವಿಲ್ಲದ ಗಂಡಸಿನ ದೇಹ ಸಿಕ್ಕಿರುವುದಾಗಿ ಮತ್ತು ಮೃತದೇಹದ ಮೇಲೆ ವಾಣಿ ಮತ್ತು ಐಶ್ವರ್ಯ ಎಂಬ ಹಚ್ಚೆ ಗುರುತು ಇರುತ್ತದೆ ಎಂದು ವಿಜಯ ಕರ್ನಾಟಕ ಪೇಪರ್ ನಲ್ಲಿ ಬಂದಿದೆ, ಅದು ರುದ್ರಸ್ವಾಮಿಯದೇ ಇರಬಹುದು ಎಂದು ತಿಳಿಸಿ ಆ ಬಗ್ಗೆ ಆತ ಮತ್ತು ನನ್ನ ತಾಯಿ ಅಜ್ಜಂಪುರ ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಿಕೊಂಡು ಬರುವಂತೆ ತಿಳಿಸಿದರು ಎಂದರೆ ಸರಿಯಲ್ಲ. ದಿನಾಂಕ 11.11.2018 ರಂದು ಪ್ರಾಸಾ.7 ಮತ್ತು ಪ್ರಾಸಾ.8 ರವರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಶವಾಗಾರಕ್ಕೆ ಹೋಗಿ ಅಲ್ಲಿ ಮೃತದೇಹವನ್ನು ನೋಡಿ ಅದು ನನ್ನ ಅಣ್ಣ ರುದ್ರಸ್ವಾಮಿಯ ಮೃತ ದೇಹವೆಂದು ಫೋನ್ ಮಾಡಿ ತಿಳಿಸಿದರು ಎಂದರೆ ಸರಿಯಲ್ಲ.

7. ನಂತರ ಪ್ರಾಸಾ.7 ಮತ್ತು ಪ್ರಾಸಾ.8 ರವರಿಂದ ನನ್ನ ಅಣ್ಣನ ಸಾವಿನ ಬಗ್ಗೆ ವಿಚಾರ ತಿಳಿಯಲಾಗಿ ರುದ್ರಸ್ವಾಮಿಯು ಬೆಂಗಳೂರಿನ ಚಾಮುಂಡೇಶ್ವರಿ ನಗರದಲ್ಲಿ ವಾಸವಿದ್ದ ಸಮಯದಲ್ಲಿ 1 ನೇ ಆರೋಪಿ ಮತ್ತು ಆಕೆಯ ಗಂಡ ಸ್ವಾಮಿಯನ್ನು ಪರಿಚಯ ಮಾಡಿಕೊಂಡು ಆತ 1 ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧ ಬೆಳೆಸಿಕೊಂಡಿದ್ದಾಗಿ

ತಿಳಿಯಿತು ಎಂದರೆ ಸರಿಯಲ್ಲ. ನಂತರ ಆಕೆಯೊಂದಿಗೆ ಫೋಟೋ ತೆಗೆಸಿಕೊಂಡು ರುದ್ರಸ್ವಾಮಿ ಆಕೆಯ ಗಂಡನಿಗೆ ತೋರಿಸುವುದಾಗಿ ಮತ್ತು Face book ನಲ್ಲಿ ಬಿಡುವುದಾಗಿ ಬ್ಲಾಕ್ ಮೇಲ್ ಮಾಡಿ ಕಿರುಕುಳ ನೀಡುತ್ತಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ರುದ್ರಸ್ವಾಮಿಯ ಕಿರುಕುಳವನ್ನು ತಾಳಲಾರದೇ 1 ನೇ ಆರೋಪಿಯು ಆ ವಿಚಾರವನ್ನು ತನ್ನ ತಂದೆ ತಾಯಿಗೆ ತಿಳಿಸಿದ್ದಾಗಿ ನಂತರ ದಿನಾಂಕ 07.11.2018 ರಂದು ಆರೋಪಿತರು ರುದ್ರಸ್ವಾಮಿಯನ್ನು ಬೆಂಕಿಕೆರೆಗೆ ಕರೆಯಿಸಿಕೊಂಡು ಅವರ ತೋಟಕ್ಕೆ ಕರೆದುಕೊಂಡು ಹೋಗಿ ಅದೇ ದಿನ ಸಂಜೆ 5.00 ಗಂಟೆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಸೇರಿ ಮಚ್ಚು ಮತ್ತು ಕುಡುಗೋಲಿನಿಂದ ರುದ್ರಸ್ವಾಮಿಯ ಕುತ್ತಿಗೆಯನ್ನು ಕಡಿದು ರುಂಡ-ಮುಂಡವನ್ನು ಬೇರ್ಪಡಿಸಿ ಪ್ರತ್ಯೇಕ ಗೋಣಿ ಚೀಲಗಳಲ್ಲಿ ತುಂಬಿಕೊಂಡು ರುದ್ರಸ್ವಾಮಿಯ ಕಾರಿನಲ್ಲಿಯೇ ಬುಕ್ಕಾಂಬೂದಿ ಕೆರೆಗೆ ತಂದು ಎಸೆದು ಹೋಗಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಿಳಿದು ಬಂದ ಬಗ್ಗೆ ದಿನಾಂಕ 13.11.2018 ರಂದು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ನಿಪಿ.22 ಎಂದು ಗುರುತಿಸಲಾಯಿತು.

**8.** ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.22 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ

ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳುಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಶ್ರೀ ಪಿ ಇ ಎಸ್ ವಕೀಲರಿಂದ **1** ನೇ ಆರೋಪಿ ಪರವಾಗಿಃ</u>

9. ಆಗಾಗ್ಗೆ ಮನೆ ಬಿಟ್ಟು ಹೋಗುತ್ತಿದ್ದ ರುದ್ರಸ್ವಾಮಿ ಎಷ್ಟು ವರ್ಷಗಳಾದರೂ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿ. ಈಗಲೂ ಸಹ ಆತ ಎಲ್ಲಿಗೆ ಹೋಗಿದ್ದಾನೆ ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ.

<u>ಪಾಟೀ ಸವಾಲು: **2** ರಿಂದ **4** ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.